International Journal of Kannada Research
www.kannadajournal.com

ISSN: 2454–5813
IJKR 2018; 4(3): 222-224
© 2018 IJKR
www.kannadajournal.com
Received: 09-05-2018
Accepted: 10-06-2018

**ವಿಜಯಕುಮಾರ ಬಿ ಬೀಳಗಿ**
Research Scholar
Department of Kannada
Gulabarga University Kalburgi,
Karnatak, India

**Correspondence**
**ವಿಜಯಕುಮಾರ ಬಿ ಬೀಳಗಿ**
Research Scholar
Department of Kannada
Gulabarga University Kalburgi,
Karnatak, India

# ತತ್ವಪದಕಾರರು: ಕಲಬುರಗಿ ಜಿಲ್ಲೆ

**ವಿಜಯಕುಮಾರ ಬಿ ಬೀಳಗಿ**

**ಪೀಠಿಕೆ**

ಸಾಮಾನ್ಯವಾಗಿ ಗ್ರಾಮೀಣ ಪ್ರದೇಶದಲ್ಲಿ ಕಂಡು ಬರುವ ತತ್ವಪದಗಳು ಜನಮುಖಿಯಾಗಿವೆ. "ತತ್ವಪದಗಳು ಜನಸಾಮಾನ್ಯರಿಗೆ ತಿಳಿಯುವ ಹಾಗೆ ಅವರ ನಾಲಿಗೆಯ ಮೇಲೆ ನಲಿಯುವ ನಿತ್ಯದ ಭಾಷೆಯಲ್ಲಿಯೇ ರಚನೆಗೊಂಡಿದ್ದು, ಜನಪರವಾದ ನಿಲುವುಗಳನ್ನು ಜನ ಸಮ್ಮುಖ ಧೋರಣೆಗಳನ್ನು ಒಳಗೊಂಡಿದ್ದು ವಿಶೇಷವಾಗಿದೆ. ತತ್ವಪದಗಳನ್ನು ಜನ ಭಜನೆಯ ಹಾಡುಗಳೆಂದು, ಅನುಭಾವ ಪದಗಳೆಂದು ಹಾಗೂ ಕೈವಲ್ಯ ಪದಗಳೆಂದು ಕರೆಯುವುದುಂಟು. ಇಂದಿಗೂ ಹಳ್ಳಿಗಳಲ್ಲಿ ಸಾಮಾನ್ಯ ಜನರು ಈ ಹಾಡುಗಳನ್ನು ಭಜನಾ ಸಂದರ್ಭಗಳಲ್ಲಿ ಹಾಡುತ್ತಾರೆ" [೧]

ಜಾನಪದ ಸಾಹಿತ್ಯ ಶ್ರೀ ಸಾಮಾನ್ಯರಿಗಾಗಿ ಶ್ರೀಸಾಮಾನ್ಯರಿಂದ ಹುಟ್ಟಿಕೊಂಡು ಬಂದ ಸಾಹಿತ್ಯ ಈ ಸಾಹಿತ್ಯದಲ್ಲಿ ಅನುಭಾವ, ತತ್ವಸಿದ್ಧಾಂತಗಳ ಹಿರಿಮೆ ಅಡಕವಾಗಿರುತ್ತದೆ. ಇದು ಗುರುವಿನಿಂದ ದೊರೆತ ಸಂಪತ್ತು, ಕೆಲವರು ಬಲ್ಲವರಿಂದ ಕೇಳಿದ ಜ್ಞಾನ ಪ್ರತಿಭಾವಂತ ಅನುಭಾವಿ ಕವಿಗಳು ತಮ್ಮದೇಯಾದ ಭಾಷೆಯಲ್ಲಿ ತಮಗೆ ಹೊಳೆದ ದಾಟಿಯಲ್ಲಿ ತಮಗಾದ ಜ್ಞಾನ ಅನುಭಾವವನ್ನು ಹಾಡಿದರು. ಶ್ರೀಸಾಮಾನ್ಯರ ಇಂತಹ ಅನುಭಾವದ ಹಾಡುಗಳು ಭಜನೆ ಹಾಡುಗಳಾಗಿವೆ. ಒಟ್ಟಿನಲ್ಲಿ ಕೆಳವರ್ಗದ ಜನರ ಸ್ವರೂಪವನ್ನು ಅರಿಯಲು ಸಹಾಯಕವಾಗುವಂತಹ ಪದಗಳಾಗಿವೆ. ಭಕ್ತನ ಆತ್ಮಾನುಭವಕ್ಕೆ ಇವು ನೇರವಾಗಿ ಸಂಬಂಧಿಸಿದ್ದರಿಂದ ಇವಕ್ಕೆ ಕೆಲವರು ಕೈವಲ್ಯ ಪದಗಳೆಂದು ಕರೆದಿದ್ದಾರೆ." [೨]

**ತತ್ವಪದದ ಅರ್ಥ:**

"ತತ್ವ ಎಂದರೆ ನಿಯಮಸಿದ್ಧಾಂತ, ಆಧ್ಯಾತ್ಮಿಕ ಚಿಂತನೆ, ಜೀವಾತ್ಮ ಪರಮಾತ್ಮರಲ್ಲಿ ಒಂದಾಗಲು ಚಿಂತಿಸುವ ಚಿಂತನಾ ಕ್ರಮವನ್ನೊಳಗೊಂಡ ಹಾಡುಗಳೇ ತತ್ವಪದಗಳು. ಪರಮಾತ್ಮನಿಗೆ ಸಂಬಂಧಿಸಿದಂತೆ ಸಿದ್ಧಾಂತವನ್ನು ವಿವರಿಸುವ ಮಾಧ್ಯಮವೇ ತತ್ವಗಳು. ಇವುಗಳ ಒಳ ಹೂರಣ ಆಧ್ಯಾತ್ಮವೇ ಆಗಿದೆ. ಭಕ್ತನು ಪರಮಾತ್ಮನ ಬಗೆಗೆ ತಾಳಿದ ಧ್ಯಾನ ಚಿಂತನೆ, ಶ್ರದ್ಧೆ, ಆಧ್ಯಾತ್ಮಿಕ ಅನುಭಾವ ಈ ಪದಗಳಲ್ಲಿ ಬಗೆಯಾಗಿ ವ್ಯಕ್ತಗೊಂಡಿರುವುದುಂಟು. ತತ್ವಪದಗಳಲ್ಲಿ ತತ್ವ ಮತ್ತು ಪದ ಇವರೆಡಕ್ಕೂ ಅರ್ಥಪೂರ್ಣವಾದ ಸಂಬಂಧ ಇದೆ. ತತ್ವ–ವಸ್ತುವಾದರೆ, ಪದ–ಅಭಿವ್ಯಕ್ತ ಮಾಧ್ಯಮ, ವಸ್ತು ಮತ್ತು ಅಭಿವ್ಯಕ್ತ ಇವರೆಡನ್ನು ಸಮನ್ವಯಗೊಳಿಸಿಕೊಂಡಿರುವ ತತ್ವಪದ ಕನ್ನಡ ಸಾಹಿತ್ಯದ ಒಂದು ವಿಶಿಷ್ಟ ಸಾಹಿತ್ಯ ಪ್ರಕಾರವಾಗಿರುವುದರ ಜೊತೆಗೆ ಸಂಸ್ಕೃತಿಯೊಂದರ ಪ್ರತೀಕವೂ ಆಗಿದೆ. ತತ್ವಪದಗಳು ಹರ ಸಂಸ್ಕೃತಿಯನ್ನು ಹೇಳಿದರೆ, ಕೀರ್ತನೆಗಳು ಹರಿ ಸಂಸ್ಕೃತಿಯನ್ನು ಹೇಳುತ್ತವೆ." [೩]

**ಕಲಬುರಗಿ ಜಿಲ್ಲೆಯ ದಲಿತ ತತ್ವಪದಕಾರರು:**

ಸಾಧು ಶರಣರ ನಾಡು ಸೂಫಿ ಸಂತರ ಮತ್ತು ತತ್ವಪದಕಾರರ ಹಾಗೂ ಕೀರ್ತನೆಕಾರರ ನಾಡಾದ ಕಲಬುರಗಿ ಜಿಲ್ಲೆಯು ಸಂಪತ್ಭರಿತ ಪ್ರದೇಶವಾಗಗಿ ಸಾಂಸ್ಕೃತಿಕ ಐಕ್ಯತೆಯ ಪ್ರದೇಶವಾಗಿದೆ. ಕಲಬುರಗಿ ಜಿಲ್ಲೆಯ ತತ್ವಪದಕಾರರನ್ನು ಗುರ್ತಿಸುವಲ್ಲಿ ದಲಿತ ತತ್ವಪದಕಾರರು ಮತ್ತು ದಲಿತೇತರ ತತ್ವಪದಕಾರರೆಂದು ಗುರ್ತಿಸಬಹುದಾಗಗಿದೆ.

"ದಲಿತ ತತ್ವಪದಕಾರ ಒಟ್ಟು ೦೮ ಜನ ಇದ್ದಾರೆ. ಅವರುಗಳನ್ನು ಈ ಕೆಳಕಂಡಂತೆ ಗುರ್ತಿಸಬಹುದಾಗಿದೆ. ೧. ಜಂಬಗಿ ಶರಣ ೨. ಕ್ವಾನಳ್ಳಿ ಹೊನ್ನಪ್ಪ ಮಹಾರಾಜರು ೩. ಬೆಡಜರಗಿ ಬಕ್ಸಾರಿ ೪. ಕಲ್ಯಾಣಿ ಮಾಸ್ತರ ೫. ಅಣ್ಣಪ್ಪ ಮಾಸ್ತರ ೬. ನಾಗಮೂರ್ತಿ ನಾಯಿಕೊಡೆ ೭.

ಮಲ್ಲಿಕಾರ್ಜುನ ಸ್ವಾಮಿ ೮. ದ್ಯಾಗಾಯಿ ಶಿವಶರಣ"೪. ಮುಂತಾದವರನ್ನು ನಾವು ಇಲ್ಲಿ ಕಾಣಬಹುದಾಗಿದೆ.

**ದಲಿತೇತರ ಕಲಬುರಗಿ ಜಿಲ್ಲಾ ತತ್ವಪದಕಾರರು**

೧. ರಾಮಪೂರದ ಬಕ್ಕಪ್ಪಯ್ಯ ೨) ಬಿದನೂಉರ ಗಂಗಮ್ಮ ೩) ಕಡಕೋಳ ಮಡಿವಾಳಪ್ಪ ೪) ಚನ್ನೂರ ಜಲಾಲ ಸಾಹೇಬ ೫)ಖೈನೂರ ಕೃಷ್ಣಪ್ಪ ೬)ಕಡ್ಲೇವಾಡ ಸಿದ್ಧಪ್ಪ ೭) ಎಮ್ಮಡಗಿ ಪ್ರಭುದೇವ ೮) ನಿಂಬರಗಿಯ ನಾರಾಯಣ ೯) ಐನ್ನೋಳಿ ಕರಿಬಸವಾರ್ಯ ೧೦) ಕೋಲಕುಂದಿ ಬಾಪಣ್ಣ ೧೧) ಮೋಟ್ನಳ್ಳಿ ಹಸನಸಾಹೇಬ ೧೨) ತಳವಾರಗೇರಿ ಬಸವನಗೌಡ ೧೩) ಧಂಗಾಪೂರದ ಬಸವಣೆಪ್ಪ ೧೪) ಮಹಾಗಾಂವದ ಗುರುಲಿಂಗಸಿದ್ಧ ೧೫) ದೇಗಾಂವ ಗುಂಡಪ್ಪ ೧೬) ಕಲಬುರಗಿಯ ಅಂಬಾದಾಸ ೧೭) ನರೋಣದ ಹೈದರಲಿ ೧೮) ಅಂಬಲಗಿ ಜಗದೇವಪ್ಪ ೧೯) ಹೀರಾಪೂರ ಚೆನ್ನಬಸವೇಶ್ವರ ಸ್ವಾಮಿ ೨೦) ವಡಗೇರಿ ಭೀಮಶ್ಯಾ ೨೧) ಕೌಲಗಿ ಆನಂದರಾಯ ೨೨) ಕಾಳಗಿ ಮಶಾಕಸಾಬ ೨೩)ದೇವಿಕೇರಿ ರೇವಯ್ಯ ೨೪) ಅಮ್ಮಾಪುರದ ಹನುಮಂತ ೨೫) ಕೆರೆಭಾಸಗಿಯ ರೇವಣಸಿದ್ಧಯ್ಯ ಸ್ವಾಮಿ ೨೬) ಸಿದ್ಧರಾಮ ಶಿವಯೋಗಿ ೨೭) ನರೋಣದ ಕಾಶಿನ್ನಾಥ ೨೮) ಬೇನೂರು ಭಗವಾನಸಿಂಗ್ ೨೯) ರಾಜೋಳದ ಮುರಘೇಂದ್ರ ಸ್ವಾಮಿ ೩೦) ನರೋಣದ ಬಂಡೆಪ್ಪಾ ೩೧) ಸಿರಗಾಪೂರದ ಬಂಡೆಪ್ಪಾ ೩೨) ಭೀಮನಳ್ಳಿ ಕೊಟ್ರಪ್ಪ ಶಾಸ್ತ್ರಿ ೩೩) ಕೌಳೂರು ಸಿದ್ಧಾರಾಮ ಶಿವಯೋಗಿ ೩೪) ಬಿಜಾಸ್ಪುರದ ಮಲ್ಲಿಕಾರ್ಜುನ ಶಾಸ್ತ್ರಿ ೩೫) ದೇಗಾಂವದ ಹಜರತ್ ಸಾಹೇಬ ೩೬)ಸಾವಳಗಿಯ ಮಹ್ಮದ ೩೭) ಸಲಗರದ ಸಿದ್ರಾಮಪ್ಪ ೩೮) ಜಾಲಿಬೆಂಚಿ ರಾಮಯ್ಯ ೩೯) ಕೋನಾಪುರದ ರಾಮಪ್ಪ ೪೦) ಕಮಲಾಪುರದ ಮಲ್ಲಪ್ಪ ೪೧) ಸಲಗರ ಸಂಗಯ್ಯ ೪೨) ಸಲಗರದ ಲಕ್ಷ್ಮಣ ೪೩) ಧಂಗಾಪೂರದ ಶಿವಶರಣಪ್ಪ ೪೪) ಮಹಾಗಾಂವದ ಮೀರಸಾಹೇಬ ೪೫) ದಿಕ್ಸಂಗಿ ಚನ್ನಯ್ಯ ೪೬) ಕರಿಬಸವೇಶ್ವರ ಶಿವಾಚಾರ್ಯರು ೪೭) ಬಳೂರಗಿ ದುಂಡಲಿಂಗಪ್ಪ ೪೮) ಯನಗುಂಟಿ ವೀರಮ್ಮ ೪೯) ಕಲರಗಿ ಶರಣಪ್ಪ ೫೦) ನಿಂಬೋಳಿ ತಿಪ್ಪಣ್ಣಾ ಮಾಸ್ತರ" ಹೀಗೆ ಮುಂತಾದವರನ್ನು ನಾವು ಇಲ್ಲಿ ಕಾಣಬಹುದಾಗಿದೆ.

**೧. ಮೋಟ್ನಳ್ಳಿ ಹಸನಸಾಬ ಪದಗಳು**

ಯಾರಗೊಡವಿಯೇನು । ಏ ಮಾನವ । ನೀನ ಗ್ಯಾರಗೋಡವಿ ಏನು ।
ಮಾರಹರನ ಮನ ಸಾಧಿಸಿ ಭಜಿಸಿದರೆ । ಯಾರಗೊಡವಿ ಏನು ।

**೨. ಹೇರೂರು ವೀರುಪಾನಗೌಡರ ಪದಗಳು**

ಜ್ಞಾನ ಪದ್ಧತಿಯ ತಿಳಿಯದೆ
ಆನಿ ಏರಿದರೇನು ? ಫಲವಣ್ಣ
ಸ್ವಾನುಭವದ ಸುಖ ಮೌನದಿ ತಿಳಿದರೆ
ಭಾನುಶೇಖರ ಪರಿಪೂರ್ಣವಣ್ಣ ।

**೩. ಕಡಕೋಳ ಮಡಿವಾಳಪ್ಪನವರ ಪದಗಳು**

ಎಂಥ ಆಕಳ ಕೊಟ್ಟ ಗುರು ಕಾಮಧೇನ
ಹಗಲ ಇರುಳು ಹಾಲಗರಿವದೊಂದ ಸವನ
ಉಂಡು ನೋಡಿದವನೆ ಬಲ್ಲ ಇದರ ಹೈನ
ಬೆಲೆ ಮಾಡುವವರಿಲ್ಲಪ್ಪ ಅದರ ಸವನ
ಮಾತು ಕಲಿಯಬೇಕು
ಮಾತಿನ ನೀತಿ ತಿಳಿಯಬೇಕು
ಮಾತು ಬಲ್ಲ ಮಹಾಜ್ಞಾನಿಯ ಕೂಡ
ಕೋತಿ ಹಂಗ ಬೆನ್ನು ಹತ್ತಿರಬೇಕು
ಮೂಕನಾಗಬೇಕು ಜಗದೊಳ ಜ್ವಾಕ್ಯಾಗಿರಬೇಕು

**೪. ಕೊಳ್ಳೂರ ಹುಸನಸಾಬರ ಪದಗಳು**

ಮೂಲ್ಯಾಗ ಕುಂತಾಳ ಮುಕ್ಕಡಿ
ಒಂಕ ಹಿಡಿದ ತೂಗತಾಳ ತಕ್ಕಡಿ
ಹೆಂಗಸ ಮಾತ್ರ ಆದ ಆಕಡಿ
ಕಳಕೋಬ್ಯಾಡೋ ನಿನ್ನ ಘೊಂಗಡಿ

**೫. ಕೋನಾಪೂರ ಶಾಮಪ್ಪನ ಪದಗಳು**

ಹೊಟ್ಟೆ ತುಂಬಲು ಶಿವನ ಬಿಟ್ಟು ಬಿಡುವರೋ
ಬಟ್ಟೆ ಕಾಣದೆ ಶಿವನ ಖೊಟ್ಟಿಯೆಂಬರೋ
ಇಟ್ಟಂಗಿಯ ಭಟ್ಟಿಯಂತೆ ಸುಟ್ಟು ಹೋಗುವರೋ

**ದಲಿತ ತತ್ವಪದಕಾರರು**

**೧. ಜಂಬಗಿ ಶರಣರ ಪದಗಳು**

೧. ಏನಿದು ಏನಿದು ಕಟಪಟ
ತಿಳಿದು ವ್ಯಾಪರ ಮಾಡಿಕೋ ಝಟಪಟ
ಸತ್ಯದ ನುಡಿ ಶರಣರ ಆಟ।

೨. ಶಿಕ್ಷಣಾಗರಿ ಗುರು ಸಿಕ್ಕರ ಬಿಡಬ್ಯಾಡ
ಗುರುಸಿಗಬೇಕಾದ್ರ ದುರ್ಲಭ
ಬಿತ್ತಿ ಬೆಳಿರಿ ಶಿವ ತತ್ವದ ನುಡಿಗಳು
ಭಕ್ತಿಸಿದವನಿಗೆ ಬಹುಲಾಭ ।

**೨ ಕ್ವಾನಳ್ಳಿ ಹೊನ್ನಪ್ಪ**

೧. ಬೇಡಿಕೊಂಬೆ ದೇವಾ ನಿಮಗೆ ಈ
ಮೂಢ ಬಾಲಕನಿಗೆ ದಯೆ ಮಾಡೋ ಬೇಗ ।

**೨. ಜಾತಿಗೆ ಜೀತನಾಗಿ**

ಜ್ಯೋತಿ ಕಂಡನ ಯೋಗಿ
ನಿಜನಾಮದಲ್ಲಿ ಜನಿಸಿದ್ದೇವೋ
ನಮಗೆಲ್ಲಿ ಕುಲವೋ ।

**೩ ಬೆಡಜುರಗಿ ಬಕ್ಸಾರಿ**

ಕರಿಯ ಗೂಳಿ ನನಗ । ಆರುವ ಹಾರಿಸಿತವ್ವ
ನನಗ ಹಿಡಿದತ ದೆವ್ವ । ಎರಡು ಮನಸ್ಸಿನವ್ವ ।

**೪ ಅಂಜುಟಗಿ ಕಲ್ಯಾಣ ಮಾಸ್ತರ**

**೧. ಬಾಬಾನ ಚರಣಕ್ಕೆ ವಂದನಾ**

ಕೈ ಹಿಡಿದು ಕರೆಯಪ್ಪ ಕಂದನಾ
ಇಂದಿನ ಅನ್ಯಾಯ
ಬಯಲು ಮಾಡಪ್ಪ ಭಗವಾನ ।

**೨. ಕಲಿಯುದೊಳಗಿನ ಕಲಹವ ಕೇಳಿರಿ**

ಕುಲ ಕುಲ ಎನ್ನುವ ಕಾಲವನು
ಕುಲಕುಲ ಎನ್ನುತ ಬಲೆಯಲ್ಲಿ ಬೀಳುತ
ಹೊಲೆ ಹೊಲೆಯ ಎನ್ನುತ ಹಿಂದುಳಿಯೀತ ।

ಜೈ ಭೀಮ ಮಾಡಿದ ಕ್ರಾಂತಿ
ಭಾರತ ಬಡವರ ಮನಶಾಂತಿ
ಸರ್ವರಿಗೆ ಮಾಡುವೆ ವಿನಂತಿ
ಹರುಷದಿಂದ ವರ್ಷ ಮಾಡಿರಿ ಜಯಂತಿ
ಸ್ವಾಭಿಮಾನದಿಂದ ವಿನಂತಿ
ಮೂಢ ನಂಬಿಕೆಯಿಂದ ಅಧೋಗತಿ ಎಂದು ವಿಡಂಭಿಸುತ್ತಾರೆ.

**೫ ದ್ಯಾಗಾಯಿ ಶಿವಶರಣಪ್ಪ**

೧. ಮಾನಗೇಡಿ ಮಂದಿ ಕೂಡ ಮಾತೇನ
ಆಗಬೇಕು ಮಮತಾ ಇಡಲಿಲ್ಲ ಖೂನ
ಕುಡಿಯುವುದರಲ್ಲಿ ಕಾಲ ಕಳೀತಾರ ದಿನ್ನ
ಹಿಂಗೆ ಮಾಡಿ ಕೆಡಿಶ್ಯಾರ ಹಿಂದೂಸ್ತಾನ ।

೨. ಸಂಸಾರದಲ್ಲಿ ಮಗಳೆ ಶಾಂತಿ ತಾಳಬೇಕಮ್ಮ
ಸುಖ ದುಃಖ ಎರಡು ಸಮನಂದು ನೀ ಬಾಳಬೇಕಮ್ಮ ।

೩. ಅಕ್ಷರ ಕಲಿಯರಿ ಸಾಕ್ಷರ ಅಭಿವೃದ್ಧಿ
ಅಕ್ಷರ ಕಲಿತಾಗ ವಿಶ್ವದ ಸುದ್ಧಿ
ಕಳಕೊಂಡು ಹುಡುಕಬ್ಯಾಡ್ರಿ ಇಂಥಾ ಸುಸಂಧಿ
ಸಹೋದರಂತೆಯೆ ಬಾಳನು ನಾವು ಹೊಂದಿ
ದ್ಯಾಗಯಿ ಶಿವಶರಣನ ಸ್ವಪ್ನದಲ್ಲಿ ವರದಿ
ಭೀಮ ಕೂಗಿ ಹೇಳಿದ ಬಲ್ಲಿ ಕರದಿ
ಬಾಂಧವರಿಗೆ ಹೇಳೆಂದ ಕರ ಮುಗಿದಿ

ಹೀಗೆ ಕಲಬುರಗಿ ಜಿಲ್ಲೆಯಲ್ಲಿನ ದಲಿತ ಮತ್ತು ದಲಿತೇತರ ತತ್ವಪದಕಾರರು ತಮ್ಮದೆಯಾದ ಅನುಭವ ಮತ್ತು ಅಂತರ್ ದೃಷ್ಠಿಯ ಮೂಲಕ ತತ್ವಪದಗಳನ್ನು ರಚಿಸಿ, ಸಾಮಾಜದಲ್ಲಿನ ಜನ-ಜೀವನಕ್ಕೆ ತಮ್ಮ ನಡೆ-ನುಡಿ ಹಾಗೂ ಬದುಕಿನ ಬವಣೆಯಲ್ಲಿನ ವಿವಿಧ ತೊಂದರೆಗಳನ್ನು ರಚಿಸಿಕೊಡುವ ಮಹತ್ತರ ಕೆಲಸವನ್ನು ಈ ತತ್ವಪದಕಾರರು ಮಾಡಿದ್ದಾರೆ. ಹೀಗೆ ಕಲಬುರಗಿ ಜಿಲ್ಲೆಯಲ್ಲಿನ ದಲಿತ ಮತ್ತು ದಲಿತೇತರ ತತ್ವಪದಕಾರರು ವಿಶಿಷ್ಟವಾಗಿ ಕಂಡುಬರುತ್ತಾರೆ.